# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1580
ಸದಸ್ಯರ ಹೆಸರು : ಶ್ರೀ ಅರುಣ ಶಹಾಪುರ
ಉತ್ತರಿಸುವ ದಿನಾಂಕ : 11-03-2022
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಸತಿ ಶಾಲೆ/ ಕಾಲೇಜುಗಳಲ್ಲಿ ಖಾಯಂ ಸೇವೆ ಸಲ್ಲಿಸಿ ಮರಣ ಹೊಂದಿದ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಹೌದಾದರೆ ಇಡಿಗಂಟಿನ ಪರಿಹಾರದ ಫಲಾನುಭವಿಗಳೆಷ್ಟು; ಎಷ್ಟು ಮೊತ್ತ ನೀಡಲಾಗಿದೆ? (ವಿವರಣಾತ್ಮಕ ಪಟ್ಟಿ ನೀಡುವುದು) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ 826 ವಸತಿ ಶಾಲೆ/ ಕಾಲೇಜುಗಳು (ಪರಿಶಿಷ್ಟ ಜಾತಿ-503, ಪರಿಶಿಷ್ಟ ವರ್ಗ-156, ಹಿಂದುಳಿದ ವರ್ಗ-167) ಕಾರ್ಯನಿರ್ವಹಿಸುತ್ತಿವೆ.<br><br>ಸದರಿ ವಸತಿ ಶಾಲೆ/ ಕಾಲೇಜುಗಳಲ್ಲಿ ಒಟ್ಟು 18,988 ಬೋಧಕ/ ಬೋಧಕೇತರ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 5,801 ಖಾಯಂ ಬೋಧಕ /ಬೋಧಕೇತರ ಸಿಬ್ಬಂಧಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇಲ್ಲಿಯವರೆಗೆ ಒಟ್ಟು 56 ಸಿಬ್ಬಂದಿಗಳು ನಿಧನ ಹೊಂದಿರುತ್ತಾರೆ.<br><br>ಸರ್ಕಾರದ ಆದೇಶ ಸಂಖ್ಯೆ: ಆಇ 03 ಸೇಸಿಸೇ 2010, ದಿನಾಂಕ: 12.10.2010 ರನ್ವಯ ಹಾಗೂ ಸಂಘದ 71ನೇ ಆಡಳಿತ ಮಂಡಳಿಯ ತೀರ್ಮಾನದಂತೆ ಸಂಘದ ಖಾಯಂ ಸಿಬ್ಬಂದಿ ಸೇವೆಯಲ್ಲಿರುವಾಗಲೇ ಮೃತರಾದ ಸಂದರ್ಭದಲ್ಲಿ ಅವರ ಕುಟುಂಬಗಳಿಗೆ ಇಡಿಗಂಟಿನ ಪರಿಹಾರವನ್ನು ನೀಡಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ.<br><br>ಅದರಂತೆ 01.04.2018 ವರೆಗೆ ವಸತಿ ಶಾಲೆಗಳಲ್ಲಿ 25 ಸಿಬ್ಬಂದಿಗಳು ಮರಣ ಹೊಂದಿದ್ದು, ಈ ಪೈಕಿ 23 ಸಿಬ್ಬಂದಿಗಳಿಗೆ ಇಡಿಗಂಟಿನ ಸೌಲಭ್ಯವನ್ನು ನೀಡಲಾಗಿರುತ್ತದೆ. ಇಡಿಗಂಟಿನ ಮೊತ್ತದ ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ.<br><br>ಸರ್ಕಾರದ ಆದೇಶ ಸಂಖ್ಯೆ ಆಇ 34 ಪಿಇಎನ್ 2018, ದಿನಾಂಕ: 23.06.2018 ರಲ್ಲಿ ಇಡಿಗಂಟಿನ ಸೌಲಭ್ಯವನ್ನು ದಿನಾಂಕ: 01.04.2018 ರಿಂದ ಅನ್ವಯಿಸಿ ಹಿಂಪಡೆಯಲಾಗಿದೆ. |

ಸಂಖ್ಯೆ: ಸಕಇ 149 ಮೊದೇಶಾ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1580 ಕ್ಕೆ ಅನುಬಂಧ–01**

| ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಮೃತರಾದ ಸಿಬ್ಬಂದಿಗಳ ಕುಟುಂಬದವರಿಗೆ ಇಡಿಗಂಟಿನ ಪರಿಹಾರ ನೀಡಿರುವ ವಿವರ | | | | | |
|---|---|---|---|---|---|
| ಕ್ರ ಸಂ. | ಹೆಸರು | ಹುದ್ದೆ | ಕಾರ್ಯನಿರ್ವಹಿಸುತ್ತಿದ್ದ ಶಾಲೆ ಹೆಸರು | ಮರಣ ಹೊಂದಿದ ದಿನಾಂಕ | ಇಡಿಗಂಟಿನ ಪರಿಹಾರ |
| 1 | ಶ್ರೀ.ಕುಮಾರ ಸ್ವಾಮಿ | ಕನ್ನಡ ಶಿಕ್ಷಕರು | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಚಿತ್ರದುರ್ಗ ಜಿಲ್ಲೆ | 29.04.2012 | 9,140 |
| 2 | ಶ್ರೀಮತಿ ಉಷಾ ರಾಣಿ ಡಿ.ಆರ್ | ಶುಶ್ರೂಷಕರು | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಭುವನಹಳ್ಳಿ, ತುಮಕೂರು ಜಿಲ್ಲೆ | 19.06.2014 | 1,98,800 |
| 3 | ಶ್ರೀ.ತಿಪ್ಪೇಸ್ವಾಮಿ ಎ | ವಿಜ್ಞಾನ ಶಿಕ್ಷಕರು | ಮೊರಾರ್ಜಿ ವಸತಿ ಶಾಲೆ, ಅವರೆಗೆರೆ, ದಾವಣಗೆರೆ ಜಿಲ್ಲೆ | 20.06.2015 | 2,17,200 |
| 4 | ಶ್ರೀ ಲಕ್ಷ್ಮಣ ನಾಯ್ಕ | ಹಿಂದಿ ಶಿಕ್ಷಕರು | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಚೇಳೂರು ಬಾಗೇಪಲ್ಲಿ ತಾ॥, ಚಿಕ್ಕಬಳ್ಳಾಪುರ ಜಿಲ್ಲೆ | 6.12.2015 | 2,11,800 |
| 5 | ಶ್ರೀ.ಷಣ್ಮುಖಪ್ಪ ವಾಲಿಕರ | ಪ್ರ.ದ.ಸ | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಐಮಂಗಲ, ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ | 22.05.2017 | 1,92,000 |
| 6 | ಶ್ರೀ.ಭೀಮರಾಯ ಮರಗಪ್ಪ ಮಾದರ | ಕನ್ನಡ ಶಿಕ್ಷಕರು | ಮೊರಾರ್ಜಿ ವಸತಿ ಶಾಲೆ, ದನ್ನೂರು, ಹುನಗುಂದ ತಾ. ಬಾಗಲಕೋಟೆ | 25.02.2015 | 2,17,200 |
| 7 | ಶ್ರೀ, ಗುರುಲಿಂಗಯ್ಯ ಗುರುಪಾದಯ್ಯ ಹಿರೇಮಠ | ಸಂಗೀತ ಶಿಕ್ಷಕರು | ಮೊರಾರ್ಜಿ ದೇಸಾಯಿ ವಸತಿ ಶಾಲೆ,ಯಾದವಾಡ ಗೋಕಾಕ್ ತಾ॥, ಬೆಳಗಾವಿ ಜಿಲ್ಲೆ. | 08.01.2016 | 2,11,800 |
| 8 | ನಾಗರತ್ನ ಎಂ | ಕನ್ನಡ ಶಿಕ್ಷಕರು | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬನ್ನೂರು, ಟಿ.ನರಸೀಪುರ ತಾ, ಮೈಸೂರು ಜಿಲ್ಲೆ | 26.06.2015 | 2,22,600 |
| 9 | ಯತೀಶ್ ಎಸ್.ಎನ್, | ವಾರ್ಡನ್ | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಹುರ, ನಂಜನಗೂಡು ತಾ, ಮೈಸೂರು ಜಿಲ್ಲೆ | 31.08.2015 | 1,78,800 |
| 10 | ಭೀಮಪ್ಪ ಕಡಕೋಳ | ಪ್ರ.ದ.ಸ | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬಾವಿಕೆರೆ, ಚಿಕ್ಕಮಗಳೂರು ಜಿಲ್ಲೆ | 10.01.2016 | 1,87,200 |
| 11 | ಅಂಕುಶ್ ಡೋಂಗ್ರೆ | ದೈಹಿಕ ಶಿಕ್ಷಣ ಶಿಕ್ಷಕರು | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬಗದಲ್, ಬೀದರ್ ಜಿಲ್ಲೆ | 04.12.2011 | 35,300 |
| 12 | ಬಸಪ್ಪ | ಕನ್ನಡ ಶಿಕ್ಷಕರು | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮಸರ್‌ಕಲ್, ರಾಯಚೂರು ಜಿಲ್ಲೆ | 24.04.2014 | 2,17,200 |
| 13 | ಬಸವಲಿಂಗಪ್ಪ | ಗಣಿತ ಶಿಕ್ಷಕರು | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ದೇವದುರ್ಗಾ, ರಾಯಚುರು ಜಿಲ್ಲೆ | 23.05.2014 | 2,17,200 |
| 14 | ರಾಘವೇಂದ್ರ ಟಿ.ಆರ್ | ದೈಹಿಕ ಶಿಕ್ಷಣ ಶಿಕ್ಷಕರು | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹಲುವಾಗಿಲು, ಹರಪ್ಪನಹಳ್ಳಿ, ಬಳ್ಳಾರಿ ಜಿಲ್ಲೆ | 04.03.2017 | 1,17,000 |
| 15 | ಪುಷ್ಪಾ ಜೋಷಿ | ಸಂಗೀತ ಶಿಕ್ಷಕರು | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಗುಂಡಾಗುರ್ತಿ, ಕಲಬುರಗಿ ಜಿಲ್ಲೆ | 20.05.2017 | 2,11,800 |